ನಂತರ ಅಮನ್ ಆತನನ್ನು ಮಾತಿಗೆಳೆದ. ''ಬಾಬಾ, ಪೊಲೀಸ್ ಠಾಣೆಯಲ್ಲಿ ನಿಮ್ಮಂತಹವರಿಗೆ ಏನು ಕೆಲಸ?''

ಆತ ನಿಧಾನವಾಗಿ ಉತ್ತರಿಸತೊಡಗಿದ, ''ಏನು ಹೇಳಲಿ ಮಗನೇ, ಎಲ್ಲವೂ ನಾಶವಾಗಿಹೋಯಿತು; ಸರ್ವನಾಶ! ಈಗ ಪ್ರಾಮಾಣಿಕತೆಯ ಜಗತ್ತು ಕಣ್ಮರೆಯಾಗಿ ಹೋಗಿದೆ. ನಾನು ಮಾಡಿದ ಒಂದೇ ಒಂದು ತಪ್ಪಿನಿಂದ ನನ್ನ ಇಡೀ ಕುಟುಂಬ ಬೀದಿಗೆ ಬೀಳಲಿದೆ. ಈಗ ನನ್ನ ಹೆಣ್ಣುಮಕ್ಕಳ ಮದುವೆಯನ್ನು ಹೇಗೆ ಮಾಡಲಿ? ನನ್ನ ಬದುಕೇ ಸರ್ವನಾಶವಾಯ್ತು!''

''ಏನಾಯಿತು ಹೇಳಿ...''

''ಏನು ಹೇಳುವುದು ಮಗನೇ, ನನ್ನ ವಹಿವಾಟು ಸಂಪೂರ್ಣ ಕುಸಿದುಹೋಗಿತ್ತು. ದೇವಿ ಮಂಟಪ ರಸ್ತೆಯಲ್ಲಿರುವ ವ್ಯಕ್ತಿಗೆ ನನ್ನ ಬಂಗಲೆಯನ್ನು ಮಾರಾಟ ಮಾಡಿ, ಬೇರೆಲ್ಲಿಯಾದರೂ ಸಣ್ಣ ಮನೆಯನ್ನು ಖರೀದಿಸೋಣ; ಇಬ್ಬರು ಹೆಣ್ಣುಮಕ್ಕಳ ಮದುವೆಯನ್ನು ಮಾಡಿಮುಗಿಸೋಣ ಎಂದುಕೊಂಡಿದ್ದೆ. ಇಬ್ಬರು ಅಳಿಯಂದಿರ ಮನೆಗೆ ತಲಾ ಇಪ್ಪತ್ತು ಲಕ್ಷಗಳನ್ನು ನೀಡುವ ಬಗ್ಗೆ ಮಾತುಕತೆಯಾಗಿತ್ತು. ಬಂಗಲೆ ಮಾರಿದ ಹಣವನ್ನು ಬ್ಯಾಗ್‌ನಲ್ಲಿ ಹಾಕಿಕೊಂಡು ಆಟೊದಲ್ಲಿ ಮನೆಗೆ ಬರುತ್ತಿರುವಾಗ, ನನ್ನ ಮೂರ್ಖತನದಿಂದ ಅದನ್ನು ಆಟೊದಲ್ಲಿಯೇ ಬಿಟ್ಟುಬಿಟ್ಟೆ. ಆಟೊ ನಂಬರನ್ನೂ ನೋಡಿಕೊಂಡಿಲ್ಲ. ಪೇಪರಿನವರಿಗೆ ಸುದ್ದಿ ಕೊಟ್ಟರೂ, ಅದು ಪ್ರಕಟವಾದರೂ ಇದುವರೆಗೆ ಒಬ್ಬನೂ ಬ್ಯಾಗ್ ತಂದುಕೊಡಲಿಲ್ಲ; ಫೋನ್ ಕೂಡ ಬಂದಿಲ್ಲ. ಒಂದೆರಡು ದಿನಗಳಲ್ಲಿ ಮತ್ತೊಂದು ಸುದ್ದಿ ಪ್ರಕಟವಾಗಬಹುದು ಅಷ್ಟೇ...''

''ಏನು?''

''ಒಂದೇ ಪರಿವಾರದ ನಾಲ್ವರ ಆತ್ಮಹತ್ಯೆ' ಎನ್ನುವ ಸುದ್ದಿ.''

ಆ ವ್ಯಕ್ತಿ ಜೋರಾಗಿ ಅಳತೊಡಗಿದ್ದ. ಈ ವಿಷಯ ಕೇಳಿದ ಅಮನ್ ಒಳಗೊಳಗೇ ಕುಸಿದುಹೋಗಿದ್ದ. ಕಾಂಕೇ ಸಮೀಪಿಸಿತು. ತನ್ನ ಮನೆಯ ಮುಂದೆ ಬರುತ್ತಿದ್ದಂತೆ ಆಟೊ ನಿಲ್ಲಿಸುವಂತೆ ಸೂಚಿಸಿದ ಆ ವ್ಯಕ್ತಿ. ಅಮನ್ ಅಲ್ಲಿಂದ ತನ್ನ ಮನೆಯತ್ತ ಆಟೊ ತಿರುಗಿಸಿದ. ''ನನ್ನ ಅದೃಷ್ಟದ ಫಲವಾಗಿ ನನಗೆ ಈ ಹಣ ದೊರಕಿದೆ. ನಾನು ಇದರಿಂದ ಮಗನಿಗೆ ಚಿಕಿತ್ಸೆ ಕೊಡಿಸುತ್ತೇನೆ. ಈ ಹಣದ ಮೇಲೆ ನನಗೆ ಅಧಿಕಾರವಿದೆ. ನಾನೇನು ಸತ್ಯ ಹರಿಶ್ಚಂದ್ರನ ವಂಶದ ತುಂಡೇ! ಹಣವನ್ನು ಹಿಂದಿರುಗಿಸುವುದು ಮೂರ್ಖತನವಾದೀತು.''

ಕೂಡಲೇ ಇನ್ನೊಂದು ಮನಸ್ಸು ಎಚ್ಚರಿಸಿತು 'ಇಲ್ಲ, ನಿನಗೆ ಈ ಹಣದ ಮೇಲೆ ಯಾವುದೇ ಅಧಿಕಾರವಿಲ್ಲ. ಇದು ಆ ವ್ಯಕ್ತಿ ತನ್ನ ಬಂಗಲೆಯನ್ನು ಮಾರಿ, ಪಡೆದುಕೊಂಡಿರುವ ಹಣ. ಇದರಿಂದ ಆತ ಸಣ್ಣದೊಂದು ಮನೆ ಖರೀದಿಸಲು, ಇಬ್ಬರು ಹೆಣ್ಣುಮಕ್ಕಳ ವಿವಾಹ ಮಾಡಲು ನಿರ್ಧರಿಸಿದ್ದಾನೆ. ಈ ಹಣ ಸಿಗದಿದ್ದರೆ, ಆತನ ಕುಟುಂಬದ ನಾಲ್ವರು ಸದಸ್ಯರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಇದಕ್ಕೆ ನೀನೇ ಕಾರಣನಾಗುತ್ತೀಯ. ಹಣವನ್ನು ಆತನಿಗೆ ಹಿಂದಿರುಗಿಸು...'

'ಇಲ್ಲ, ನಾನು ಹಣವನ್ನು ಹಿಂದಿರುಗಿಸುವುದಿಲ್ಲ. ಜಗತ್ತಿನಲ್ಲಿ ಪ್ರತಿನಿತ್ಯ ಲಕ್ಷಾಂತರ ಜನ ಸಾಯುತ್ತಿರುತ್ತಾರೆ; ಅದರ ಬಗ್ಗೆ ಯೋಚಿಸುವುದು ಸಾಧ್ಯವೇ? ಆತ ಬ್ಯಾಗ್ ಮರೆತುಹೋದರೆ, ಅದರಲ್ಲಿ ನನ್ನ ತಪ್ಪೇನಿದೆ? ಒಂದು ವೇಳೆ ನಾನು ಆತನನ್ನು ಹೆದರಿಸಿ, ಬ್ಯಾಗ್ ಕಿತ್ತುಕೊಂಡಿದ್ದರೆ, ತಪ್ಪು ನನ್ನದಾಗುತ್ತಿತ್ತು. ಇದು ನನಗೆ ದೇವರೇ ನೀಡಿದ ಹಣ. ನಾನು ಇದನ್ನು ಮರಳಿಸಲಾರೆ...

ಲಕ್ಷಾಂತರ ಜನರು ಸಾಯುತ್ತಾರೆ ನಿಜ; ಅವರ ಸಾವಿಗೆ ನೀನು ಕಾರಣನಾಗುವುದಿಲ್ಲ ಎನ್ನುವುದೂ ನಿಜ; ಆದರೆ, ಈ ಪರಿವಾರದ ನಾಲ್ವರ ಸಾವಿಗೆ ನೀನೇ ಕಾರಣನಾಗುತ್ತೀಯ.' ಒಳಮನಸ್ಸು ಆತನನ್ನು ಮತ್ತೊಮ್ಮೆ ಎಚ್ಚರಿಸಿತು.